

# ಯುಗಪುರುಷ

ಸಿ.ಎಸ್. ಮಂಗಳಮ್ಮ

ಶ್ರೀರಾಮಕೃಷ್ಣರ ಅವತರಣದಿಂದ ಜಗತ್ತಿನಲ್ಲಿ ಅನೇಕ ಹೊಸ ಆದರ್ಶಗಳು ನಿರ್ಮಾಣಗೊಂಡವು. ಅವರ ಬದುಕಿನ ಅಂತರಾರ್ಥವನ್ನು ಕಂಡುಕೊಳ್ಳುವುದರಿಂದ ಮಾತ್ರ ಇದರ ಮಹತ್ವವನ್ನು ಅರಿಯಬಹುದು. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಗ್ರಂಥಗಳನ್ನು ರಚಿಸಿರುವ ಅವರು ಈ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

**''ಹಿಂದೆ ಯಾರು ರಾಮನಾಗಿದ್ದನೋ, ಯಾರು ಕೃಷ್ಣನಾಗಿದ್ದನೋ ಅವನೇ ಈಗ ರಾಮಕೃಷ್ಣನಾಗಿದ್ದಾನೆ. ಆದರೆ ನಿನ್ನ ವೇದಾಂತದ ದೃಷ್ಟಿಯಿಂದಲ್ಲ.''** *(– ಶ್ರೀರಾಮಕೃಷ್ಣರು)*

ಕೊಲ್ಕತ್ತೆಯ ಪ್ರಸಿದ್ಧ ವಕೀಲ ಶ್ರೀಮಂತ ವಿಶ್ವನಾಥದತ್ತನ ಪುತ್ರನಾದ ಮಹಾಮೇಧಾವಿ ನರೇಂದ್ರನಾಥನಿಗೆ, ತಮ್ಮ ಮಹಾಸಮಾಧಿಗೆ ಎರಡು ದಿನಗಳ ಮುಂಚೆ ತಮ್ಮ ಅವತಾರ ರಹಸ್ಯವನ್ನು ಬಿಚ್ಚಿಟ್ಟವರು ಶ್ರೀರಾಮಕೃಷ್ಣರು! ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರಿಗೆ ಗಂಟಲುಹುಣ್ಣು ಆಯಿತು. ಅದು 'ಏಡಿಹುಣ್ಣು'(ಕ್ಯಾನ್ಸರ್) ಎಂದು ತಿಳಿದಾಗ ಭಕ್ತರೆಲ್ಲರೂ ಸೇರಿ ಉತ್ತಮ ಚಿಕಿತ್ಸೆಗಾಗಿ ಕೊಲ್ಕತ್ತದ ಹತ್ತಿರದಲ್ಲಿ ಕಾಶೀಪುರಬಾಟಿಗೆ ಕರೆತಂದರು. ಶ್ರೀರಾಮಕೃಷ್ಣರ ಸೇವಾ ಶುಶ್ರೂಷೆಯನ್ನು ಹಗಲೂ-ಇರುಳು ಅವರ ಶಿಷ್ಯರು ವಹಿಸಿಕೊಂಡರು. ತರುಣಶಿಷ್ಯರಲ್ಲಿ ನರೇಂದ್ರನಾಥ ಶ್ರೀರಾಮಕೃಷ್ಣರಿಗೆ ಅಚ್ಚುಮೆಚ್ಚಾಗಿದ್ದ. 'ದೇವರಿದ್ದಾನೆಯೆ?' ಎಂಬ ಸಂದೇಹ ಪರಿಹಾರಕ್ಕಾಗಿ ಕೊಲ್ಕತ್ತೆಯ ಮಹಾ ಮಹಾ ವಿದ್ವಾಂಸರೂ, ಪಂಡಿತರುಗಳೆಲ್ಲರ ಬಳಿ ಹೋಗಿಬಂದರೂ ಸರಿಯಾದ ಉತ್ತರ ಸಿಕ್ಕಿರಲಿಲ್ಲ. ಕಡೆಗೆ 'ದಕ್ಷಿಣೇಶ್ವರ ದೇವನಿಲಯದ ಪರಮ ಯೋಗೀಂದ್ರ' ಶ್ರೀರಾಮಕೃಷ್ಣರ ಬಳಿಗೆ ಬಂದು ಪ್ರಶ್ನೆಗೆ ಖಚಿತವಾದ ಉತ್ತರವನ್ನೂ ಪಡೆದ. ಸುಮಾರು ನಾಲ್ಕು ವರ್ಷಗಳ ಕಾಲ ಅವರ ಸಹವಾಸದಿಂದ ತನ್ನ ನೆಚ್ಚಿನ ಗುರುವೆಂದು ಸ್ವೀಕರಿಸಿದ. ಅಂತೆಯೇ ಶ್ರೀರಾಮಕೃಷ್ಣರೂ ಸಹ ಇವನನ್ನು ಮೆಚ್ಚಿನ ಶಿಷ್ಯನೆಂದೂ ಹಾಗೂ ತಮ್ಮ ಕಟ್ಟಕಡೆಯ ಕಾಲದಲ್ಲಿ , ತಪಶ್ಶಕ್ತಿಯೆಲ್ಲವನ್ನೂ ಅವನಿಗೆ ಧಾರೆಯೆರೆದರು. ಆ ಜಗತ್ಕಲ್ಯಾಣ ಕಾರ್ಯಕ್ಕೆ ನರೇಂದ್ರನಾಥನೂ ಸಿದ್ಧನಾಗಿಯೇ ಇದ್ದ.

ಮಹಾಸಮಾಧಿಗೆ ಒಂದೆರಡು ದಿನಗಳಿಗೆ ಮುಂಚೆ, ಶ್ರೀರಾಮಕೃಷ್ಣರು ಹಾಸಿಗೆಯ ಮೇಲೆ ಮಲಗಿದ್ದಾರೆ, ನೋವಿನಿಂದ ಕಷ್ಟಪಡುತ್ತಿದ್ದಾರೆ. ಆಗ ನರೇಂದ್ರನಾಥನಲ್ಲದೆ ಕೊಠಡಿಯಲ್ಲಿ ಬೇರೆ ಯಾರೂ ಇರಲಿಲ್ಲ. ಶ್ರೀರಾಮಕೃಷ್ಣರು ತದೇಕದೃಷ್ಟಿಯಿಂದ ನರೇಂದ್ರನನ್ನು ನೋಡುತ್ತಿದ್ದಾರೆ. ಆಗ ನರೇಂದ್ರನಾಥನಿಗೆ ಮೈಯೆಲ್ಲ ವಿದ್ಯುತ್‌ಸಂಚಾರವಾದಂತಾಗಿದೆ. ವಿಶೇಷ ಶಕ್ತಿಯೊಂದು ಹರಿದಂತಾಗಿದೆ. ಶ್ರೀರಾಮಕೃಷ್ಣರ ನರಳಾಟವನ್ನು ನೋಡುತ್ತಿದ್ದಾನೆ. ಮನಸ್ಸಿನಲ್ಲಿ ಇದ್ದಕ್ಕಿದ್ದಂತೆ ಒಂದು ಸಂದೇಹ ಮೂಡಿ, 'ಈಗಲೂ ಇವರು ತಮ್ಮನ್ನು ಅವತಾರ ಪುರುಷರೆಂದು ಹೇಳಿದರೆ ಒಪ್ಪಬಹುದು' ಎಂದು ಯೋಚಿಸುತ್ತಿದ್ದಂತೆಯೇ ಶ್ರೀರಾಮಕೃಷ್ಣರು ತಮ್ಮ ಹತ್ತಿರಕ್ಕೆ ಬರುವಂತೆ ಸನ್ನೆ ಮಾಡಿದರು, ಹೋದಾಗ ಬಹಳ ಕಷ್ಟದಿಂದ ಮೇಲೆ ಹೇಳಿರುವಂಥ ಮಾತನ್ನು ಹೇಳಿದಾಗ, ನರೇಂದ್ರನಾಥನಿಗೆ ತನ್ನ ಸಂಶಯದ ಬಗ್ಗೆ ಲಜ್ಜೆಯುಂಟಾಗಿ ತಲೆತಗ್ಗಿಸಿದನು. ತನ್ನ ಗುರುಗಳ ಬಗ್ಗೆ ಮತ್ತಷ್ಟು ಶ್ರದ್ಧೆ ಹೆಚ್ಚಿತು.

ಶ್ರೀರಾಮಕೃಷ್ಣರನ್ನು ಅವತಾರ ಪುರುಷರೆಂದು ಮೊಟ್ಟ ಮೊದಲು ಘೋಷಿಸಿದವಳು ಭೈರವಿ ಬ್ರಾಹ್ಮಣಿ ! ಅವಳು ಶಾಸ್ತ್ರಗಳನ್ನು ಓದಿದ ವಿದ್ಯಾವಂತೆ. ಶ್ರೀರಾಮಕೃಷ್ಣರಿಗೆ ತಂತ್ರ ವಿದ್ಯೆಯನ್ನು ಕಲಿಸಿದ ಪ್ರಥಮಗುರು. ಯಾವುದೇ ಗುರುವಿನ ಬಳಿ ಶಿಷ್ಯನೆಂದು ಬಾಗಿ ಕಲಿಯದ ಶ್ರೀರಾಮಕೃಷ್ಣರು, ಅಗೋಚರ ಶಕ್ತಿಯ ಬೆಂಬಲದಿಂದಲೇ ಕಠಿಣ ಸಾಧನೆಯ ಮೂಲಕ ಭಗವತಿಯ ಸಾಕ್ಷಾತ್ಕಾರನ್ನು ಪಡೆದುಕೊಂಡ ಪರಮಹಂಸರು! ಬಾಲ್ಯದಲ್ಲಿ ಹಳ್ಳಿಯ ಗದ್ದೆಯ ಬಯಲಿನಲ್ಲಿ ಕಂಡ ವಿಸ್ಮಯಕಾರಿ ಚಿತ್ರವೊಂದು, ಪ್ರಕೃತಿಯರಹಸ್ಯವನ್ನು ಅರಿಯುವತ್ತ ಮುನ್ನಡೆಸಿತು. 'ಮೂರು ಕಾಸಿನ ರೊಟ್ಟಿಯ ಸಂಪಾದನೆ'ಯ ವಿದ್ಯೆಗೆ ಸಮ್ಮತಿಸದೆ, ದೈವನಂಬುಗೆಯನ್ನು ಭಕ್ತಿ-ಚಿಂತನೆಯತ್ತ ಗಮನ ಕೊಟ್ಟರು. ಇವರ ಹಂಬಲಕ್ಕೆ ದೈವ ಸಹಾಯವೆಂಬಂತೆ, ರಾಣಿ ರಾಸಮಣಿ ದಕ್ಷಿಣೇಶ್ವರದಲ್ಲಿ ಕಟ್ಟಿಸಿದ 'ಭವತಾರಿಣಿ'ಯ ಸನ್ನಿಧಿಗೆ ಅವರನ್ನು ವಿಧಿ ಎಳೆತಂದಿತು. ಅರ್ಚಕರಾಗಿ ಸೇವೆ ಸಲ್ಲಿಸುವ ಸದವಕಾಶವೂ ಒದಗಿ ಬಂದಿತು.

ಭವತಾರಿಣಿಯ ಸನ್ನಿಧಿಯೇ ಸಾಧನಾ ಕ್ಷೇತ್ರವಾಯಿತು. ಅರ್ಚಕನಿಗೆ ವಿಗ್ರಹ ಶಿಲಾಮೂರ್ತಿಯಾಗಲಿಲ್ಲ. ಸಾಕ್ಷಾತ್ ಭಗವತಿಯೇ ಆದಳು. ಸುಮಾರು ಹನ್ನೆರಡು ವರ್ಷಗಳ ಕಠಿಣ ಸಾಧನೆಯಿಂದ ಭಗವತಿಯ ಸಾಕ್ಷಾತ್ಕಾರವಾಯಿತು. ದರ್ಶನ ಪಡೆದದ್ದು ಅಖಂಡ ಬೆಳಕಿನ ಮೂಲಕ! ಅರಿತರು, 'ಜಗವೆಲ್ಲ ಶಿವಮಯ, ಜೀವ-ಶಿವರಲ್ಲಿ ಭೇದವಿಲ್ಲ; ಜೀವಸೇವೆಯೇ ಶಿವಸೇವೆ' ಎಂಬ ರಹಸ್ಯವನ್ನು. ನಂತರ ಭವತಾರಿಣಿಯ ಅರ್ಚನಕ್ರಮದಲ್ಲಿ ಬದ್ಧತೆ ಇರುತ್ತಿರಲಿಲ್ಲ. ಇವರ ಪೂಜಾಕ್ರಮದಿಂದ ಸುತ್ತಲಿನವರು, 'ಅರ್ಚಕರಿಗೆ ಬುದ್ಧಿಭ್ರಮಣೆ ಆಗಿದೆ' ಎಂದು ದೇವಸ್ಥಾನದ ಮೇಲ್ವಿಚಾರಕನಾದ ಮಥುರನಾಥ ವಿಶ್ವಾಸನಿಗೆ ದೂರು ಕೊಟ್ಟರು.

ಮಥುರನಾಥನಿಗೆ ಶ್ರೀರಾಮಕೃಷ್ಣರಲ್ಲಿ ಅತ್ಯಂತ ಗೌರವ ಹಾಗೂ ಪೂಜ್ಯಭಾವನೆ ಇತ್ತು. ಅದಕ್ಕೆ ಕಾರಣ ಹೀಗಿದೆ : ಒಂದು ದಿನ ಮಥುರನಾಥ ದಕ್ಷಿಣೇಶ್ವರದಲ್ಲಿದ್ದ ತನ್ನ ಮನೆಯ ಮೇಲ್ಛಾವಣಿಯಲ್ಲಿ ಅಡ್ಡಾಡುತ್ತಿದ್ದಾನೆ. ಕೆಳಗಡೆ ಶ್ರೀರಾಮಕೃಷ್ಣರು ತಮ್ಮ ಕೊಠಡಿಯ ಮುಂಭಾಗದಲ್ಲಿನ ವರಾಂಡದಲ್ಲಿ ಶತಪಥ ಹಾಕುತ್ತಿದ್ದಾರೆ. ಆಗ ಇದ್ದಕ್ಕಿದ್ದಂತೆ ಮಥುರಾನಾಥ ಒಂದು ದೃಶ್ಯವನ್ನು ಕಂಡು ಬೆರಗಾಗಿದ್ದಾನೆ. ಶ್ರೀರಾಮಕೃಷ್ಣರು ನಡೆಯುತ್ತಿದ್ದಾಗ ಮುಂಭಾಗದಲ್ಲಿ ಶಿವನಂತೆಯೂ, ಹಿಂತಿರುಗಿ ಬರುವಾಗ ಹಿಂದೆ ಶಕ್ತಿಯಂತೆಯೂ ಕಂಡನು. ಇದು ಕನಸಲ್ಲವೆಂದು ಸ್ಪಷ್ಟೀಕರಿಸಿಕೊಂಡು, ಕೆಳಕ್ಕೆ ಇಳಿದು ಬಂದು ನಮಸ್ಕರಿಸುತ್ತಾನೆ 'ಬಾಬಾ, ನೀವು ಸಾಮಾನ್ಯರಲ್ಲ' ಎಂದು ತಾನು ಕಂಡ ಸತ್ಯವನ್ನು ಹೇಳುತ್ತಾನೆ. ಶ್ರೀರಾಮಕೃಷ್ಣರು ಏನೂ ಹೇಳದೆ, 'ಅದು ನಿನ್ನ ಭಾವನೆ' ಎಂದು ಬಿಡುತ್ತಾರೆ. ಇದಲ್ಲದೆ ಶ್ರೀರಾಮಕೃಷ್ಣರ ಸಾಧನೆಯ ಸಮಯದಲ್ಲಿ ಅವರಿಗೆ ಯಾವ ತೊಂದರೆಯೂ ಆಗದಂತೆ 'ರಸದ್ದಾರ'ನಾಗಿ ಸೇವೆ ಸಲ್ಲಿಸುತ್ತಿದ್ದನು.

ಸುತ್ತಮುತ್ತಲಿನವರ ದೂರಿಗೆ ಸಂಬಂಧಪಟ್ಟಂತೆ ಶ್ರೀರಾಮಕೃಷ್ಣರನ್ನು ಪ್ರಸಿದ್ಧ ವೈದ್ಯರ ಬಳಿ ಔಷಧೋಪಚಾರಗಳನ್ನೂ ಮಾಡಿಸುತ್ತಾನ. ಆದರೆ ಅದು ಉತ್ತಮ ಫಲಿತಾಂಶ ಕೊಡಲಿಲ್ಲ. ಆ ಸಮಯದಲ್ಲಿ ಭೈರವಿಬ್ರಾಹ್ಮಣಿ ದಕ್ಷಿಣೇಶ್ವರದಲ್ಲಿದ್ದಳು. ಶ್ರೀರಾಮಕೃಷ್ಣರ ಸಾಧನೆಗೆ ನೆರವಾಗುತ್ತಿದ್ದಳು. ಮಾತೃವಾತ್ಸಲ್ಯದಿಂದ ಉಪಚರಿಸುತ್ತಿದ್ದಳು. ಮಥುರನಾಥನ ಬಳಿ ಹೇಳುತ್ತಾಳೆ, ''ಇವರಿಗೆ ಯಾವ ರೋಗವೂ ಇಲ್ಲ. ಇದು ಅವತಾರ ಪುರುಷರ ಲಕ್ಷಣ. ಕೊಲ್ಕತ್ತೆಯ ವಿದ್ವಾಂಸರುಗಳನ್ನೆಲ್ಲ ಸೇರಿಸಿ ಬಂದು ಸಭೆ ಏರ್ಪಡಿಸು. ನಾನು ಶಾಸ್ತ್ರಾಧಾರದ ಸಾಕ್ಷ್ಯಗಳ ಮೂಲಕ ಸಾಬೀತುಪಡಿಸುತ್ತೇನೆ.'' ಮಥುರನಾಥನಿಗೆ ಇವಳ ಮಾತಿನಲ್ಲಿ ವಿಶ್ವಾಸವಿಲ್ಲದಿದ್ದರೂ ಶ್ರೀರಾಮಕೃಷ್ಣರ ಆರೋಗ್ಯದ ಬಗ್ಗೆ ಕಾಳಜಿ ಇದ್ದದ್ದರಿಂದ ಒಪ್ಪಿಕೊಂಡು ದೇವಸ್ಥಾನದ ಆವರಣದಲ್ಲಿಯೇ ಸಭೆ ಸೇರುವಂತೆ ಏರ್ಪಾಡು ಮಾಡಿದ. ಅಂದಿನ ಸಮಾಜದಲ್ಲಿ ಖ್ಯಾತ ನಾಮರಾಗಿದ್ದ ವಿದ್ವಾಂಸರು ಕುತೂಹಲದಿಂದಲೇ ಆಗಮಿಸಿದರು. ಬ್ರಾಹ್ಮಣಿಯನ್ನು ನಾನಾ ರೀತಿಯ ಪ್ರಶ್ನೆಗಳನ್ನು ಕೇಳಿದರು. ಪ್ರತಿಯೊಂದಕ್ಕೂ ತಕ್ಕ ಉತ್ತರವನ್ನು ಕೊಟ್ಟಳು. ಕೊನೆಗೆ ಶ್ರೀರಾಮಕೃಷ್ಣರು ಅವತಾರ ಪುರುಷರೆಂದು ಘೋಷಿಸಲ್ಪಟ್ಟರು! ಅಂದಿನ ಸಭೆಯಲ್ಲಿ ಶ್ರೀರಾಮಕೃಷ್ಣರೂ ಸನಿಹದಲ್ಲಿಯೇ ಕುಳಿತು, ವಾದ, ವಿವಾದಗಳನ್ನೆಲ್ಲ ಕೇಳುತ್ತಿದ್ದರು. ಸಭೆಯ ನಂತರ ಹೇಳುತ್ತಾರೆ ''ಅವತಾರ ಗಿವತಾರ ಹಾಗಿರಲಿ, ನನಗೆ 'ಹುಚ್ಚು ಇಲ್ಲ' ಎಂಬುದು ಸಾಬೀತಾಯಿತು. ಅಷ್ಟೇ ಸಾಕು'' ಎಂದು ಮುಗ್ಧಭಾವದಿಂದ ಹೇಳುತ್ತಾರೆ.

ಆ ನಂತರ ದಕ್ಷಿಣೇಶ್ವರಕ್ಕೆ ಶ್ರೀರಾಮಕೃಷ್ಣರನ್ನು ನೋಡಲು ನಾನಾ ರೀತಿಯ ಜನರು ಬರತೊಡಗಿದರು. ಪರೀಕ್ಷಿಸುವುದಕ್ಕಾಗಿ, ವ್ಯಂಗ್ಯಕ್ಕಾಗಿ, ಹೊಟ್ಟೆಕಿಚ್ಚಿಗಾಗಿ, ಕುತೂಹಲಕ್ಕಾಗಿ ಇತ್ಯಾದಿ ಕಾರಣಗಳಿಂದ. 'ಹೂವು ಅರಳಿತ್ತು, ಸೌರಭ ಹರಡಿತು; ಮಧುವನ್ನೀಂಟಲು ದುಂಬಿಗಳು ಗುಂಪು-ಗುಂಪಾಗಿ ಬರುವಂತೆ' ದಕ್ಷಿಣೇಶ್ವರದ ಭವತಾರಿಣಿಯ ಮಂದಿರ ಗಿಜಿಗಿಜಿಯಾಗತೊಡಗಿತು. ಭಗವತಿ ಭವತಾರಿಣಿ ಅಂದಿನ ಸಾಮಾಜಿಕ ಅವ್ಯವಸ್ಥೆಯ ಪರಿವರ್ತನೆಗಾಗಿ ಶ್ರೀರಾಮಕೃಷ್ಣರನ್ನು ಸಿದ್ಧಗೊಳಿಸಿದಳು; ಅವರ ನಾಲಿಗೆಯಲ್ಲಿ ನೆಲೆಸಿದಳು. ಅವರಾಡುವ ಸರಳ, ಆಡುಮಾತುಗಳು 'ಅಮೃತ ವಚನ'ವಾಯಿತು! ಭಗವದ್ಗೀತೆಯ 'ಧರ್ಮಕ್ಕೆ ಧಕ್ಕೆಯುಂಟಾದಾಗ ನಾನು ಅವತರಿಸುತ್ತೇನೆ. ಧರ್ಮ ರಕ್ಷಣೆಗಾಗಿ' ಎನ್ನುವ ಮಾತು ಮರುಕಳಿಸಿತು! ಭಗವತಿಯ ಸಾಕ್ಷಾತ್ಕಾರವಾದಾಗ ತಾವು ಕಂಡುಕೊಂಡ ದಿವ್ಯಮಂತ್ರಗಳನ್ನು ಬಿತ್ತತೊಡಗಿದರು. ಕೊಲ್ಕತ್ತೆಯ ಎಲ್ಲ ವರ್ಗದವರು ಸೇರುತ್ತಿದ್ದರು. ಶ್ರೀರಾಮಕೃಷ್ಣರ ನಾಮಸಂಕೀರ್ತನೆ, ನರ್ತನ, ಅವರ ಪ್ರೀತಿಯುತ ಮಾತುಗಳು ಚುಂಬಕದಂತೆ ಎಲ್ಲರನ್ನೂ ಸೆಳೆಯಿತು.

'ದೇವರು-ಧರ್ಮ'ದ ಬಗ್ಗೆ ಇದ್ದ ಮೂಢನಂಬಿಕೆ, ಪುರೋಹಿತ ವರ್ಗದವರ ಶೋಷಣೆ, ಮತಾಂಧತೆ, ಸಿರಿವಂತರ ದಬ್ಬಾಳಿಕೆಯಿಂದ ನೊಂದು ಸಾಮಾನ್ಯ ಜನರ ಜೀವನ ಅತ್ಯಂತ ದುಃಸ್ಥಿತಿ

ಗಿಳಿದಿತ್ತು. ಸಮಾಜ ಕಲ್ಯಾಣಕ್ಕಾಗಿ ಶ್ರೀರಾಮಕೃಷ್ಣರಿಗೆ ಮುಂಚೆಯೂ ಕೆಲವು ಮಹನೀಯರು ಶ್ರಮಪಟ್ಟಿದ್ದರು. ಈಗ ಸರಳ ಉಪಾಯಗಳಿಂದಲೇ ಸಮಾಜದ ಮನಪರಿವರ್ತಿಸುವ ಅಸ್ತ್ರವಾಯಿತು ಶ್ರೀರಾಮಕೃಷ್ಣರ ಅಮೃತವಚನಗಳು. ಭಾವನೆಗಳನ್ನು ಬದಲಾಯಿಸಿ, ಸಮಾಜ ಕಲ್ಯಾಣದತ್ತ ಮುನ್ನಡೆಸಿದ ಯುಗ ಪುರುಷ!

ನಮ್ಮ ಪುರಾಣಗಳಲ್ಲಿ ಹತ್ತು ಅವತಾರಗಳು ಪ್ರಸಿದ್ಧವಾಗಿವೆ. ಶ್ರೀರಾಮಕೃಷ್ಣರು ನರೇಂದ್ರನಾಥನಿಗೆ ಹೇಳಿದ ವಾಕ್ಯಗಳಲ್ಲಿ ರಾಮ ಮತ್ತು ಕೃಷ್ಣರನ್ನು ಒತ್ತಿ ಹೇಳಿರುವುದನ್ನು ಸ್ವಲ್ಪ ಆಳವಾಗಿ ಯೋಚಿಸಿದರೆ ಹೀಗೂ ಊಹಿಸಬಹುದೆಂದು ನನ್ನ ಅಭಿಪ್ರಾಯ. ಅವತಾರ ಪುರುಷರು ಧರೆಗೆ ಇಳಿಯುವುದು 'ಧರ್ಮ ಸಂಸ್ಥಾಪನೆಗಾಗಿ, ಸಮಾಜಕಲ್ಯಾಣಕ್ಕಾಗಿ' ಎಂಬುದು ಸತ್ಯ. ಹಿಂದಿನ ಅವತಾರಗಳು ಒಂದೊಂದು ನಿರ್ದಿಷ್ಟ ಉದ್ದೇಶಗಳಿಗಾಗಿ ನಾನಾ ವೇಷಗಳಿಂದ ಅವತರಿಸಿದರು. ಇಲ್ಲಿ ರಾಮ ಮತ್ತು ಕೃಷ್ಣರೂ ಸಹ ಸಮಾಜದ ಒಳಿತಿಗಾಗಿ ದುಷ್ಟನಿಗ್ರಹಕ್ಕಾಗಿ ಶಿಷ್ಟರಕ್ಷಣೆಗಾಗಿ ಜನಿಸಿದರು. ಎರಡರ ವಿಶೇಷತೆಯನ್ನು ಶ್ರೀರಾಮಕೃಷ್ಣರ ಅವತಾರದಲ್ಲಿ ಕಾಣುತ್ತೇವೆ.

'ಸತ್ಯಂ ವದ; ಧರ್ಮಂ ಚರ' ಇದು ಮನುಕುಲಕ್ಕೆ ಪ್ರಾಚೀನರು ನೀಡಿರುವ ಸಂದೇಶ. ಇವೆರೆಡರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಸಾಮಾಜಿಕ ಶಾಂತಿಗೆ ಭಂಗ ಉಂಟಾಗುತ್ತದೆ. ರಾಮನ ಅವತಾರದ ಕಾರಣ ರಾವಣ ಹಾಗೂ ಇತರ ರಾಕ್ಷಸರ ಸಂಹಾರ; ಹಾಗೂ ಸಾಧು ಸಜ್ಜನರ ಕಲ್ಯಾಣ. ಒಂದು ನಿರ್ದಿಷ್ಟ ಕಾರ್ಯ ನೆರವೇರಬೇಕಾದರೆ ಶ್ರದ್ಧೆ, ಭಕ್ತಿಗಳಿರಬೇಕು. ಸತ್ಯಕ್ಕೆ ಅಪಚಾರವಾಗಬಾರದು. ರಾಮ ಸೂರ್ಯವಂಶದ ದಶರಥ ಮಹಾರಾಜನ ಮಗನಾಗಿ ಜನಿಸಿದ. ಆ ವಂಶದ ಧ್ಯೇಯವಾಕ್ಯ 'ಸತ್ಯ ಪಾಲನೆ, ವಚನ ಪಾಲನೆ' ರಾಘವಾಂಕನ ಮಾತುಗಳಲ್ಲಿ 'ಸತ್ಯವೆಂಬುದೇ ಹರನು, ಹರನೆಂಬುದೇ ಸತ್ಯ'– ಎಂದು ಸತ್ಯ, ದೇವರು ಬೇರೆಯಲ್ಲ ಎಂಬುದು ಸ್ಪಷ್ಟವಾಗಿ ಪುನರುಚ್ಚರಿಸಲ್ಪಟ್ಟಿದೆ. ರಾಮನ ಜೀವನದಲ್ಲಿ ಇದು ಬೆಳಗಿದೆ. ತಂದೆಯ ಮಾತನ್ನು ಪಾಲಿಸುವುದಕ್ಕಾಗಿ ೧೪ವರ್ಷಗಳ ಕಾಲ ವನವಾಸಕ್ಕೆ ಹೊರಡುತ್ತಾನೆ. ಸೀತೆ ಮತ್ತು ಲಕ್ಷ್ಮಣರೂ ಜೊತೆಗೂಡುತ್ತಾರೆ. ಆಗ ಭರತ ಆಯೋಧ್ಯೆಯಲ್ಲಿರುವುದಿಲ್ಲ. ತಂದೆಯ ಮರಣವನ್ನು ಕೇಳಿ ಹಿಂದಿರುಗುತ್ತಾನೆ. ನಂತರ 'ಈ ರಾಜ್ಯಕ್ಕೆ ರಾಮನೇ ಅಧಿಕಾರಿ, ಅವನನ್ನು ಹಿಂತಿರುಗಿ ಕರೆತರುತ್ತೇನೆ' ಎಂದು ಹೊರಟು ಚಿತ್ರಕೂಟಕ್ಕೆ ಬರುತ್ತಾನೆ. ಅನೇಕ ವಿಧದಲ್ಲಿ ರಾಮನನ್ನು ಹಿಂತಿರುಗುವಂತೆ ಪ್ರಾರ್ಥಿಸಿದರೂ ರಾಮ ಒಪ್ಪಲಿಲ್ಲ. ಆಗ 'ಸತ್ಯ ಮತ್ತು ವಚನ ಪಾಲನೆ ಸೂರ್ಯವಂಶದವರ ಧ್ಯೇಯ. ಅದನ್ನು ನೀನೂ ಪಾಲಿಸಬೇಕು' ಎಂದು ಸಮಾಧಾನಪಡಿಸಿ, ಒಪ್ಪಿಸಿ ಕಳಿಸುತ್ತಾನೆ. ಆಗ ಭರತನೂ ಸಹ ವನವಾಸಿಯಂತೆಯೇ ಜೀವನ ಸಾಗಿಸಿ, ಕರ್ತವ್ಯಪಾಲನೆ ಮಾಡಿದ್ದಾನೆ.

ಶ್ರೀರಾಮಕೃಷ್ಣರ ಜೀವನದಲ್ಲಿಯೂ 'ಸತ್ಯ'ಪಾಲನೆಯ ಧ್ಯೇಯವನ್ನು ಕಾಣುತ್ತೇವೆ. ತಳಪಾಯದಂತಿದೆ ಅವರ ತಂದೆ ಖುದಿರಾಮ ಚಟ್ಟೋಪಾಧ್ಯಾಯರ ಜೀವನ. ಅವರಿದ್ದ ಹಳ್ಳಿಯ ಜಮೀನ್ದಾರನ ಪರವಾಗಿ ಸುಳ್ಳು ಸಾಕ್ಷಿ ಹೇಳಲು ಒಪ್ಪದ ಕಾರಣ, ಬಡತನವನ್ನು ಸ್ವೀಕರಿಸಬೇಕಾಯಿತು. ಸಂತೃಪ್ತಿಯಿಂದ ಆ ಹಳ್ಳಿಯನ್ನು ತೊರೆದರು. ಅನನ್ಯ ಭಕ್ತರ ರಕ್ಷಕ ಭಗವಂತ ಅವರ ಕೈಬಿಡಲಿಲ್ಲ. ಕಾಮಾರಪುಕುರದಲ್ಲಿ ಸಹೃದಯರ ಸಹಕಾರದಿಂದ, ಸರಳ ಜೀವನ ನಡೆಸುವಂತಾಯಿತು. ದೈವನಿಷ್ಠರಾಗಿ ಬದುಕನ್ನು ಸಾಗಿಸಿದರು. ಇವೆರಡೂ ಗುಣಗಳನ್ನು ಶ್ರೀರಾಮಕೃಷ್ಣರ ಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಲ್ಲೆವು. ಸತ್ಯವನ್ನು ಬಿಡಲಿಲ್ಲ, ದೇವರೊಂದಿಗೆ ಬಾಳಿದರು. ಯುಗಪುರುಷರಾದರು!

ಕೃಷ್ಣಾವತಾರದಲ್ಲಿ ಸಾಮಾಜಿಕ ಸುವ್ಯವಸ್ಥೆಗೆ ಕಾರಣ ಧರ್ಮಾಚರಣೆ. ಧರ್ಮ ಎಂದರೆ ಆಚರಣೆ. ಸ್ವಾಮಿ ವಿವೇಕಾನಂದರು ಸರಳವಾಗಿ ಹೇಳಿದ್ದಾರೆ 'ಒಳ್ಳೆಯವನಾಗು; ಒಳಿತನ್ನು ಮಾಡು'. ಇದನ್ನು ಪ್ರತಿ ಜೀವಿಗೂ ಹೊಂದಿಸಬಹುದು. ಒಂದು ನೀತಿ, ನಿಯಮ ಬದುಕಿಗೆ ಇರಬೇಕು. ನದಿ ಹರಿಯುವಾಗ ಎರಡು ದಡಗಳ ನಡುವೆ ಹರಿದರೆ ಲೋಕಹಿತವಾಗುತ್ತದೆ. ದಡ ಮೀರಿ ಹುಚ್ಚುಹೊಳೆಯಾದಾಗ ಸರ್ವನಾಶಕಾರಿ. ಧರ್ಮ ಏಕಮುಖವಲ್ಲ. ಪ್ರತಿಯೊಂದಕ್ಕೂ ತನ್ನದೇ ಆದ ನಿಯಮವುಂಟು. ಗೃಹಸ್ಥ ಧರ್ಮ, ವಿದ್ಯಾರ್ಥಿ ಧರ್ಮ, ವ್ಯಕ್ತಿ ಧರ್ಮ, ಸಮಷ್ಟಿಧರ್ಮ, ರಾಷ್ಟ್ರಧರ್ಮ ಇತ್ಯಾದಿ. ಶ್ರೀರಾಮಕೃಷ್ಣರು ಇದನ್ನೇ ಒತ್ತಿ ಹೇಳಿದರು.'ಮತವೆಷ್ಟೋ ಪಥಗಳೂ ಅಷ್ಟೇ ಇರುತ್ತವೆ.' ತನ್ನದೇ ಹೆಚ್ಚು ಇನ್ನೊಬ್ಬರದು ಸರಿಯಲ್ಲ ಎನ್ನವುದೇ ಅಶಾಂತಿಗೆ ಕಾರಣ. ದೇವರೆಂಬುದೂ ಹೇಗೆ ಅವರವರ ಭಾವಕ್ಕೆ ತಕ್ಕಂತೆ ಕಾಣುತ್ತದೆಯೋ, ಧರ್ಮವೂ ಹಾಗೆಯೇ. ತಾವು ಎಲ್ಲ ಧರ್ಮಗಳ ಸಾಧನೆಯನ್ನು ಮಾಡಿ, ಅನುಭವಿಸಿ ಜಗತ್ತಿಗೆ ಸಾರಿದ್ದಾರೆ – ಎಲ್ಲ ಧರ್ಮಗಳ ಗುರಿ ಒಂದೇ ಎಂದು. ಧರ್ಮಸಂಸ್ಥಾಪನೆಗಾಗಿಯೇ ಕೃಷ್ಣನ ಅವತಾರದ ಉದ್ದೇಶವಾಗಿತ್ತು.

ಶ್ರೀರಾಮಕೃಷ್ಣರು ಅವತರಿಸಿದ ಕಾಲದಲ್ಲಿ ಸಾಮಾಜಿಕ ಪರಿಸ್ಥಿತಿಯು ಅತ್ಯಂತ ಅಸಹನೀಯವಾಗಿತ್ತು. ಶತ-ಶತಮಾನಗಳ ಕಾಲದಿಂದ ಭಾರತದೇಶದ ಮೇಲೆ ಪರಕೀಯರ ದಾಳಿ, ಶಾಸನಗಳು ಸನಾತನ ಧರ್ಮದ ಮೇಲೆ ಕೆಟ್ಟ ಪ್ರಭಾವವನ್ನು ಬೀರಿದವು. ಸಾಮಾನ್ಯ ಜನರ ಜೀವನ ಅಸ್ತವ್ಯಸ್ತವಾಯಿತು. ದೇವರು-ಧರ್ಮಗಳ ವಿಚಾರದಲ್ಲಿ ಮೂಢನಂಬಿಕೆ, ಪುರೋಹಿತ ವರ್ಗದವರ ಶೋಷಣೆ, ಸಿರಿವಂತರ ದಬ್ಬಾಳಿಕೆ ಮುಂತಾದವುಗಳಿಂದ ಜನರ ಭಾವನೆಗಳು ಚದುರಿ ಹೋಗಿ, ಮುಂಗಾಣದೆ ಚಡಪಡಿಸತೊಡಗಿದರು. ಆಗಾಗ ಕೆಲವು ಮಹನೀಯರು ಈ ಧರ್ಮಾಂಧತೆಯಿಂದ ಮೇಲೆತ್ತಲು ಪ್ರಯತ್ನಿಸಿದರು. ಆದರೆ ಉತ್ತಮ ಫಲ ಸಿಗಲಿಲ್ಲ. ಇಲ್ಲಿ ಅಸ್ತ್ರ-ಶಸ್ತ್ರಗಳ ಪ್ರಯೋಗಕ್ಕಿಂತ ಭಾವನಾತ್ಮಕ ಪರಿವರ್ತನೆಯ ಅಗತ್ಯವಿತ್ತು. ಅದನ್ನು ಭಗವತಿ ಭವತಾರಿಣಿ ಶ್ರೀರಾಮಕೃಷ್ಣರ ಮೂಲಕ ನೆರವೇರಿಸಿದಳು. ಶ್ರೀರಾಮಕೃಷ್ಣರು

‘ಯುಗಪುರುಷ’ರೆನಿಸಿದರು! ಯುಗ ಎಂದರೆ ಕಾಲಮಾನ. ಕಾಲ ಚಕ್ರ ಉರುಳುತ್ತಲೇ ಇರುತ್ತದೆ. ದಾರಿಗಡ್ಡವಾಗಿ ಸಮಸ್ಯೆಗಳನ್ನು ಎದುರಿಸಿ ಸುಗಮವಾಗಿ ಮುನ್ನಡೆಸಲು ಯಾರು ಪ್ರಯತ್ನಿಸಿ ಸಫಲರಾಗುತ್ತಾರೆಯೋ ಅವರು ಅವತಾರ ಪುರುಷರು!

ಶ್ರೀರಾಮಕೃಷ್ಣರು ಯಾವ ಧರ್ಮವನ್ನೂ ಹಳಿಯಲಿಲ್ಲ. ಯಾವುದನ್ನೂ ಒತ್ತಡ ಹೇರಿ ತಲುಪಿಸಲಿಲ್ಲ. ತಮ್ಮ ಬಳಿಗೆ ಬಂದ ಪ್ರತಿಯೊಬ್ಬರನ್ನೂ ಅವರದೇ ಮಾರ್ಗದಲ್ಲಿ ನಡೆಸಿ ತಿದ್ದಿದರು. ಕೊಲ್ಕತ್ತೆಯ ಜನರು ಶ್ರೀರಾಮಕೃಷ್ಣರನ್ನು ಒಪ್ಪಿದರು, ಹಾಗೂ ಅವರ ‘ನಡೆ-ನುಡಿ’ಗಳನ್ನು ಸಮಾಜಕ್ಕೆ ತಲುಪಿಸಿದರು. ದೇವರು -ಧರ್ಮಗಳ ಬಗ್ಗೆ ಕೆಲವು ಉದಾಹರಣೆಗಳನ್ನು ನೋಡೋಣ. ಭವತಾರಿಣಿಯ ಮೂಲಕ ಪ್ರಕೃತಿ ರಹಸ್ಯವನ್ನು ಸಾಕ್ಷಾತ್ಕರಿಸಿಕೊಂಡಾಗ ಕಂಡುಕೊಂಡ ಸತ್ಯ ಹಾಗೂ ದಿವ್ಯಮಂತ್ರಗಳು ಇವು.

**‘ದೇವನೊಬ್ಬ ನಾಮ ಹಲವು’**: ಒಂದು ಕೊಳಕ್ಕೆ ನಾಲ್ಕು ಜನ ನೀರಿಗಾಗಿ ಬರುತ್ತಾರೆ. ಒಬ್ಬ ನೀರು ಎನ್ನುತ್ತಾನೆ, ಇನ್ನೊಬ್ಬ ಪಾನಿ, ಮತ್ತೊಬ್ಬ ವಾಟರ್, ಮಗದೊಬ್ಬ ಜಲ ಎಂದರೂ ನೀರು ಮಾತ್ರ ಒಂದೇ ಅಲ್ಲವೆ? ಹಾಗೆಯೇ ದೇವರು ಸಹ!

**‘ಜೀವ-ಶಿವ ಅಭೇದ’**: ಜೀವರಲ್ಲಿ ಶಿವನನ್ನು ಕಾಣಿ, ಜೀವ ಸೇವೆಯೇ ಶಿವಸೇವೆ ಎನ್ನುವುದರ ಮೂಲಕ ಮಾನವ ಧರ್ಮಕ್ಕೆ ಒತ್ತು ಕೊಡುತ್ತಾರೆ.

**‘ಧರ್ಮ’ದ ಬಗ್ಗೆ** ಹೇಳುತ್ತಾರೆ: ‘ಕಾಶಿಗೆ ಹೋಗುವ ಮಾರ್ಗಗಳು ನಾಲ್ಕಾರು. ಯಾವ ದಾರಿಯಿಂದಲಾದರೂ ತಲುಪಬಹುದು. ‘ಗುರಿ’ ಎಂದೇ ಅಲ್ಲವೆ? ಆಗಿನ ಕಾಲಕ್ಕೆ ತಕ್ಕ ರೀತಿಯಲ್ಲಿ ಸಮಸ್ಯಾ ಪರಿಹಾರ ಮಾಡಿ, ತಮ್ಮ ಅವತಾರವನ್ನು ಮೆರೆದಿದ್ದಾರೆ, ಸರಳ ಸಜ್ಜನಿಕೆಯ ಸಂತ ಶ್ರೀರಾಮಕೃಷ್ಣರು!

ಇಡೀ ಜಗತ್ತಿಗೆ ಈ ಸಂದೇಶ ತಲುಪಿಸಬೇಕೆಂಬ ಉದ್ದೇಶದಿಂದ ಕೆಲವು ತರುಣರನ್ನು ಆಪ್ತ ಶಿಷ್ಯರನ್ನಾಗಿ ಮಾಡಿಕೊಂಡು, ವಿಶೇಷ ತರಬೇತಿ ನೀಡಿದರು. ವಿಶೇಷವಾಗಿ ನರೇಂದ್ರನಾಥನಿಗೆ ಅವನಲ್ಲಿ ನಾಯಕತ್ವದ ಲಕ್ಷಣಗಳನ್ನು ಗುರುತಿಸಿದ್ದರು. ಅದಕ್ಕಾಗಿಯೇ ತಮ್ಮ ಕಡೆಗಾಲದಲ್ಲಿ ತಾವು ‘ರಾಮ ಮತ್ತು ಕೃಷ್ಣರ ಜೊತೆಗೂಡಿದ ರಾಮಕೃಷ್ಣ’ ಎಂಬುದನ್ನು ಸ್ಪಷ್ಟೀಕರಿಸಿದರು. ತಮ್ಮನ್ನು ಯಾರಾದರೂ ಗುರುಗಳೆಂದು ಕರೆದರೂ ಒಪ್ಪಿಕೊಳ್ಳದಂತಹ ಸರಳ ಜೀವಿ, ತಾವು ‘ಯುಗಪುರುಷ’ರೆಂದು ಕಟ್ಟಕಡೆಯಗಳಿಗೆಯಲ್ಲಿ ಜಾಹೀರು ಮಾಡಿದರು. ನರೇಂದ್ರನಾಥನಿಗೆ ಅವರ ಮಾತುಗಳು ಅತ್ಯಂತ ಪ್ರಭಾವ ಬೀರಿದವು.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ, ಭಕ್ತರೆಲ್ಲರೂ ಸೇರಿ ಒಂದು ಮಠ ಸ್ಥಾಪನೆ ಮಾಡಿದರು. ತರುಣ ಸಂನ್ಯಾಸಿಗಳಾದರು ಯುವಶಿಷ್ಯರು. ನರೇಂದ್ರನಾಥ ಸ್ವಾಮಿ ವಿವೇಕಾನಂದರಾದರು! ಶ್ರೀರಾಮಕೃಷ್ಣ ಸಂದೇಶವನ್ನು ಜಗತ್ತಿಗೆ ಸಾರುವುದಕ್ಕಾಗಿ ಸಂಘಸ್ಥಾಪನೆ ಮಾಡಿದರು. ‘ಶ್ರೀರಾಮಕೃಷ್ಣ ಮಹಾಸಂಘ’ದ ನೂರಾರು ಶಾಖೆಗಳು ಜಗತ್ತಿನಾದ್ಯಂತ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಸಂಘದ ಧ್ಯೇಯವಾಕ್ಯ ‘ಆತ್ಮನೋ ಮೋಕ್ಷಾರ್ಥಂ, ಜಗದ್ಧಿತಾಯಚ!’ ಕೆಲವೇ ಕೆಲವು ವರ್ಷಗಳು ಜನ ಸಾಮಾನ್ಯರ ಸಂಪರ್ಕದಲ್ಲಿದ್ದು, ಅಮೋಘವಾದ ತಮ್ಮ ನಡೆನುಡಿಗಳಿಂದ ಸಾಮಾಜಿಕ ಕ್ರಾಂತಿ, ಪರಿವರ್ತನೆಯುಂಟುಮಾಡಿದ ‘ಯುಗಪುರುಷ’ ಶ್ರೀರಾಮಕೃಷ್ಣರ ಅವತಾರದ ಮಹತ್ತನ್ನು ಏಕ ಶ್ಲೋಕದಲ್ಲಿ ಸ್ತುತಿಸಿರುವ ಸ್ವಾಮಿ ವಿವೇಕಾನಂದರ ಸ್ತುತಿಯನ್ನು ಸ್ಮರಿಸುತ್ತಾ ‘ಯುಗಪುರುಷ’ನಿಗೆ ನಮಸ್ಕರಿಸೋಣ.

**ಓಂ ಸ್ಥಾಪಕಾಯಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ ।**
**ಅವತಾರ ವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥** ❋

## ಶ್ರೀಮಾತೆಯವರ ಉಪದೇಶಗಳು



❋ ಒಂದು ದಿನ ಶ್ರೀಮಾತೆ ಒಂಬತ್ತು-ಹತ್ತು ಗಂಟೆಯ ಹೊತ್ತಿಗೆ ಒಂದೆಡೆ ಕುಳಿತು ಎಣ್ಣೆ ಹಚ್ಚಿಕೊಳ್ಳುತ್ತಿದ್ದರು. ಆಗ ಅಲ್ಲಿ ನೆಲ ಗುಡಿಸುತ್ತಿದ್ದವನು, ಕಸಬರಿಕೆಯನ್ನು ಅಲ್ಲೇ ಒಂದೆಡೆ ಬಿಸಾಡಿ ಹೋದ. ಅದನ್ನು ನೋಡಿದ ಶ್ರೀಮಾತೆ, ‘‘ಅದೇನಪ್ಪಾ, ಕೆಲಸವಾಯಿತು ಅಂತ ಅದನ್ನು ಹಾಗೇ ಅಸಡ್ಡೆಯಿಂದ ಬಿಸಾಡಿಬಿಟ್ಟೆ ? ಬಿಸಾಡುವುದಕ್ಕೆ ಎಷ್ಟು ಸಮಯ ಬೇಕಾಗುವುದೋ, ನಿಧಾನವಾಗಿ ಇಡುವುದಕ್ಕೂ ಅಷ್ಟೇ ಸಮಯ ಸಾಕು. ಕ್ಷುಲ್ಲಕ ವಸ್ತು ಅಂತ ಅದನ್ನು ತುಚ್ಛವಾಗಿ ನೋಡಬೇಕೆ ? ನೀನು ಯಾವುದನ್ನು ರಕ್ಷಿಸುತ್ತೀಯೋ, ಅದು ನಿನ್ನನ್ನು ರಕ್ಷಿಸುವುದು. ಕಸಬರಿಕೆಯಂತೂ ನಿನಗೆ ಮತ್ತೆ ಬೇಕಾಗುವುದಲ್ಲವೆ ? ಅದನ್ನು ಬಿಟ್ಟು ಬಿಡಲಾಗದು, ಈ ಸಂಸಾರದಲ್ಲಿ ಅದೂ ಒಂದು ಅಂಗ. ಆ ದೃಷ್ಟಿಯಿಂದಲೂ ಅದಕ್ಕೆ ಒಂದು ಮರ್ಯಾದೆಯಿದೆ. ಯಾವುದಕ್ಕೆ ಏನೇನು ಮಾನ, ಗೌರವ ಸಲ್ಲಬೇಕೋ ಅದನ್ನು ಸಲ್ಲಿಸಬೇಕು. ಕಸಬರಿಕೆಯನ್ನೂ ಕೂಡ ಗೌರವದಿಂದ ಒಂದೆಡೆ ಇಡಬೇಕು. ಸಾಮಾನ್ಯ ಕೆಲಸವನ್ನೂ ಶ್ರದ್ಧೆಯಿಂದ ಮಾಡಬೇಕು’’ ಎಂದರು.

ರಾಧುವಿಗೆ ಅತ್ಯಂತ ಪ್ರೀತಿಪಾತ್ರವಾದ ಬೆಕ್ಕು ಅಂಗಳದ ತುದಿಯಲ್ಲಿ ಮಲಗಿತ್ತು . ಒಬ್ಬಾಕೆ ಹೆಂಗಸು ಅದರ ಬಳಿ ನಿಂತು ಕಾಲಿ ನಿಂದ ಅದರೊಂದಿಗೆ ಆಟವಾಡುತ್ತಿದ್ದಳು. ಕ್ರಮೇಣ ಅವಳು ಅದರ ತಲೆಯ ಮೇಲೂ ಕಾಲನ್ನಿಟ್ಟಳು. ಅದನ್ನು ನೋಡಿದ ಶ್ರೀಮಾತೆ, ‘‘ಏನಮ್ಮಾ, ಅದೇನು ಮಾಡುತ್ತಿದ್ದೀಯಾ? ತಲೆ ಗುರುವಿನ ಸ್ಥಾನ. ತಲೆಯ ಮೇಲೆ ಕಾಲನ್ನಿಡಬಹುದೆ? ಅದಕ್ಕೆ ನಮಸ್ಕಾರ ಮಾಡು’’ ಎಂದರು. ಆ ಮಹಿಳೆ, ‘‘ಅಮ್ಮಾ, ಇವತ್ತೇ ನಾನಿದನ್ನು ತಿಳಿದುಕೊಂಡೆ’’ ಎಂದಳು.

*(‘ಶ್ರೀಶಾರದಾದೇವಿ ವಚನವೇದ’, ಪು. ೫೫೭)*